# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟದೆ)

ನೊಂದಾಯಿತ ವಿಳಾಸ : ನಿಗಮ ಕಾರ್ಯಾಲಯ, ನಂ. 29, ವಿಜಯನಗರ 2ನೇ ಹಂತ, ಹಿನಕಲ್, ಮೈಸೂರು-570017

ದೂರವಾಣಿ ಕಛೇರಿ : 08226-238025
ಇ ಮೇಲ್ : aeebellursubdivision@gmail.com
ದೂರವಾಣಿ: 9449598641

ಕಛೇರಿ ವಿಳಾಸ :
ಸಹಾಯಕ ಕಾರ್ಯನಿರ್ವಾಹಕ ಇಂಜನಿಯರ್ (ವಿ).
ಕಾರ್ಯ ಮತ್ತು ಪಾಲನಾ ಉಪ-ವಿಭಾಗ
ಚಾ.ವಿ.ಸ.ನಿ.ನಿ.,ಬೆಳ್ಳೂರು- 571418


ಕ್ರಮ ಸಂಖ್ಯೆ: ಸ.ಕಾ.ನಿ.ಇಂ.(ವಿ)/ಸ.ಇಂ(ತಾ)/ಬೆಳ್ಳೂರು/19-20/ 1420 ದಿನಾಂಕ:06.03.2020

## ಜನಸಂಪರ್ಕ ಸಭೆಯ ನಡಾವಳಿಗಳು

ದಿನಾಂಕ:03/03/2020 ರಂದು ಮಂಗಳವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ವಿಭಾಗೀಯ ಕಛೇರಿಯ ಆವರಣದಲ್ಲಿ ನಡೆದ ಬೆಳ್ಳೂರು ಉಪ ವಿಭಾಗದ ವ್ಯಾಪ್ತಿಯ ಜನಸಂಪರ್ಕ ಸಭೆಯ ನಡಾವಳಿಗಳು.

<u>ಹಾಜರಿದ್ದ ಅಧಿಕಾರಿಗಳು / ನೌಕರರು.</u>

ಶ್ರೀ/ಶ್ರೀಮತಿ/ಕುಮಾರಿ:

1) ಶ್ರೀನಿವಾಸಮೂರ್ತಿ : ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ
2) ಸೋಮರಾಜು : ಕಾರ್ಯನಿರ್ವಾಹಕ ಇಂಜಿನಿಯರ್(ವಿ),ನಾಗಮಂಗಲ ವಿಭಾಗ.
3) ರವಿಕುಮಾರ್ :ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ಕ) ವಿಭಾಗೀಯ ಕಛೇರಿ ನಾಗಮಂಗಲ
4) ಕುಮಾರ್ : ಪ್ರಭಾರ ಲೆಕ್ಕಾಧಿಕಾರಿ ವಿಭಾಗೀಯ ಕಛೇರಿ ನಾಗಮಂಗಲ
5) ರೇಖಾ :ಸಹಾಯಕ ಇಂಜಿನಿಯರ್(ತಾಂ), ವಿಭಾಗೀಯ ಕಛೇರಿ ನಾಗಮಂಗಲ.
6) ಹೇಮ.ಆರ್ : ಸಹಾಯಕ ಇಂಜಿನಿಯರ್(ತಾಂ), ಬೆಳ್ಳೂರು ಉಪವಿಭಾಗ
7) ವೇಣುಗೋಪಾಲ್ : ಶಾಖಾಧಿಕಾರಿ,ಬೆಳ್ಳೂರು ಶಾಖೆ
8) ನವೀನ್ ಕುಮಾರ್ : ಶಾಖಾಧಿಕಾರಿ, ಕದಬಹಳ್ಳಿ ಶಾಖೆ
9) ಸಲೀಂ ಪಾಷ : ಪ್ರಭಾರ ಶಾಖಾಧಿಕಾರಿ,ಬಿಂಡಿಗನವಿಲೆ ಶಾಖೆ

ಸಹಾಯಕ ಇಂಜಿನಿಯರ್(ವಿ)ತಾಂತ್ರಿಕ , ಕಾ. ಮತ್ತು ಪಾ ಉಪವಿಭಾಗ ಬೆಳ್ಳೂರು ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು

Scanned by CamScanner

ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಯಲ್ಲಿ ನೀಡಲಾದ ದೂರುಗಳನ್ನು ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಮೊದಲು ಪರಿಶೀಲಿಸಲಾಯಿತು. ಬಾಕಿ ಇರುವ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಂತೆ ಅಧೀಕ್ಷಕ ಇಂಜಿನಿಯರ್(ವಿ), ಮಂಡ್ಯ ರವರು ಸೂಚಿಸಿದರು.

1)ಶ್ರೀ.ನರಸಿಂಹರಾಜು ಅದ್ದಿಹಳ್ಳಿ ನಂ:-9480058810

ದೂರು:- ಶ್ರೀ.ನರಸಿಂಹರಾಜು ಅದ್ದಿಹಳ್ಳಿ ರವರ ಪವರ್ ಸ್ಥಾವರಕ್ಕೆ ದಿನಾಂಕ 13/05/2009 ದಂದು ಸಂಪರ್ಕ ಪಡೆದಿದ್ದು (ಆರ್ ಆರ್ ಸಂಖ್ಯೆ ಬಿಎಸ್‌ಪಿ-101) ಸದರಿ ಸ್ಥಾವರಕ್ಕೆ ನಿರಂತರ ಜ್ಯೋತಿ ವಿದ್ಯುತ್ ಪೂರೈಸಲು ಕೋರಿರುತ್ತಾರೆ.

ಕ್ರಮ:- ಸದರಿ ಸ್ಥಾವರದ ಸ್ಥಳ ಪರಿಶೀಲಿಸಿ ಅಂದಾಜು ಪಟ್ಟಿ ತಯಾರು ಮಾಡಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದ್ದು, ಕಾರ್ಯದೇಶವಾಗಿದ್ದು ಶ್ರೀ ಗಣೇಶ ಎಲೆಕ್ಟ್ರಿಕಲ್ಸ್ ರವರಿಗೆ ಕಾಮಗಾರಿ ಅವಾರ್ಡ್ ಅಗಿದ್ದು ಶ ಕಮಗಾರಿ ಪ್ರಗತಿಯಲ್ಲಿದೆ.

2)ಶ್ರೀ.ಎನ್.ಆರ್.ಗೋಂವಿದರಾಜು ನೆಲ್ಲಿಗೆರೆ ನಂ:-9964622144

ದೂರು:- ಶ್ರೀ.ಎನ್.ಆರ್.ಗೋಂವಿದರಾಜು ನೆಲ್ಲಿಗೆರೆ ರವರ ಐ.ಪಿ ಸ್ಥಾವರಕ್ಕೆ ದಿನಾಂಕ 07/03/2017 ದಂದು ಸಂಪರ್ಕ ಪಡೆದಿದ್ದು(BLIP-623 ಮತ್ತು BLIP-624) ಇಲ್ಲಿಯವರೆಗೂ ಮೂಲಭೂತ ಸೌಕರ್ಯ ಕಲ್ಪಿಸಿರುವುದಿಲ್ಲ, ಮೂಲಭೂತ ಸೌಕರ್ಯ ಕಲ್ಪಿಸಿಕೊಡಲು ಕೋರಿರುತ್ತಾರೆ.

ಕ್ರಮ:- ಸದರಿ ಸ್ಥಾವರದ ಸ್ಥಳ ಪರಿಶೀಲಿಸಿ ಮೂಲಭೂತ ಸೌಕರ್ಯ ಕಲ್ಪಿಸಲು ಅಗತ್ಯವಾದ ಅಂದಾಜು ಪಟ್ಟಿ ತಯಾರು ಮಾಡಿ ತುರ್ತಾಗಿ ವಿಭಾಗೀಯ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಲೆಕ್ಕಾಧಿಕಾರಿಗಳು ಸಭೆಯಲ್ಲಿ ಭಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 01:00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ-01

ಒಟ್ಟು ದೂರು/ಸಮಸ್ಯೆಗಳು- 01

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ಉಪವಿಭಾಗ,
ಬೆಳ್ಳೂರು

Scanned by CamScanner